305 (816) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಯುವಜನಸೇವಾ ಹಾಗೂ ಕ್ರೀಡಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಯಳಂದೂರು ಹಾಗೂ ಕೊಳ್ಳೇಗಾಲ ಪಟ್ಟಣಗಳಿಗೆ ಎರಡು ಕ್ರೀಡಾಂಗಣಗಳನ್ನು ಮಂಜೂರು ಮಾಡುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಇದು ಈಗ ಯಾವ ಹಂತದಲ್ಲಿದೆ;

ಇ) ಈ ಸಾಲಿನಲ್ಲಿ ಪ್ರರಂಭಿಸಲಾಗುವುದೇ?

ಶ್ರೀ ಹನುಮಂತಪ್ಪ ವೈ ಆಲ್ಕೋಡ್ (ಯುವಜನಸೇವಾ ಹಾಗೂ ಕ್ರೀಡಾ ಸಚಿವರು):

ಅ) ಬಂದಿದೆ

ಆ) ಯಳಂದೂರಿನಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಸೂಕ್ತ ಜಮೀನು ಇನ್ನು ಲಭ್ಯವಾಗಿಲ್ಲ ಸೂಕ್ತ ಜಮೀನುಪಡೆಯಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೊಳ್ಳೇಗಾಲದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಶ್ರೀ ಮಹದೇಶ್ವರ ಕಾಲೇಜು ಕೊಳ್ಳೇಗಾಲ ಇವರಿಂದ 8 ಎಕರೆ ಜಮೀನನ್ನು ಇಲಾಖೆಗೆ ವರ್ಗಾಯಿಸಿಕೊಳ್ಳಗಿದೆ. ಕ್ರೀಡಾಂಗಣ ನಿರ್ಮಾಣಕ್ಕಾಗಿ ಅಂದಾಜುಪಟ್ಟಿಯನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಲ್ಲ 2007–08ನೇ ಸಾಲಿನ ಎರಡನೇ ಹಂತದಲ್ಲಿ ಕೊಳ್ಳೇಗಾಲದಲ್ಲಿ ಮತ್ತು 2009–10ನೇ ಸಾಲಿನ 4ನೇ ಹಂತದಲ್ಲಿ ಯಳಂದೂರಿನಲ್ಲೂ, 12ನೇ ಹಣಕಾಸು ಆಯೋಗದ ಯೋಜನೆಯಡಿ ಪ್ರಾರಂಭಿಸಲು ಉದ್ದೇಶಿಸಿದೆ.

306 (817) ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದ ಬಿಳಿಗಿರಿರಂಗನ ಬೆಟ್ಟ ಕೊಳ್ಳೇಗಾಲ ಪಟ್ಟಣ ಹಾಗೂ ಯಳಂದೂರು ಪಟ್ಟಣ ಈ ಮೂರು ಕಡೆಗೆ ಬಸ್